ದೇವಸ್ಥಾನಗಳ ಜೀರ್ಣೋದ್ಧಾರದ ಅನುದಾನ ಬಿಡುಗಡೆ

1638 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ರಲ್ಲಿ ದೇವಾಲಯಗಳ ಜೀರ್ಣೋದ್ಧಾರದ ಅನುದಾನಕ್ಕಾಗಿ ನಿಗಧಿಪಡಿಸಿದ ಮೊತ್ತ ಎಷ್ಟು?*

ಆ) *1997-98ನೇ ಸಾಲಿನಲ್ಲಿ ಅನುದಾನಕ್ಕಾಗಿ ಬಂದಿರುವ ಅರ್ಜಿಗಳೆಷ್ಟು?*

ಇ) *ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ದುರಸ್ಥಿಗಾಗಿ ರೂ.1.26 ಕೋಟಿಗಳನ್ನು ಮತ್ತು ನಿರ್ಮಾಣಕ್ಕಾಗಿ ರೂ. 1.05 ಕೋಟಿಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ.

ಆ) ಈ ಸಾಲಿನಲ್ಲಿ ಈವರೆಗೆ 108 ಪ್ರಸ್ತಾಪನೆಗಳು ಅನುದಾನ ಕೋರಿ ಬಂದಿರುತ್ತದೆ.

ಇ) ಅನುದಾನವನ್ನು ಬೇಗನೇ ಬಿಡುಗಡೆ ಮಾಡಲಾಗುವುದು.

ತುಮಕೂರು ಕ್ಷೇತ್ರದಲ್ಲಿ ಅಪೂರ್ಣವಾಗಿರುವ ಹೌಸಿಂಗ್ ಬೋರ್ಡ್ ಮನೆಗಳ ಕುರಿತು.

1641 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೌಸಿಂಗ್ ಬೋರ್ಡ್ ಮುಖಾಂತರ ಮನೆಗಳನ್ನು ನಿರ್ಮಿಸಿದ್ದು ಅವುಗಳಲ್ಲಿ ಅನೇಕ ಮನೆಗಳು ಅಪೂರ್ಣವಾಗಿರುವ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಅಪೂರ್ಣವಾಗಿರುವ ಈ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದೆಯೇ?*

ಇ) *ಮಾಡದಿದ್ದಲ್ಲಿ ಕಾರಣಗಳೇನು?*

ಈ) *ತುಮಕೂರು ನಗರದ ಸುತ್ತಮುತ್ತ ಶೆಟ್ಟಿಹಳ್ಳಿ ಮತ್ತು ಮರಳೂರು ಗ್ರಾಮಗಳಲ್ಲಿ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಉಚ್ಚನ್ಯಾಯಾಲಯ ಆದೇಶ ನೀಡಿದ್ದು ಗೃಹ ಮಂಡಳಿಯು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆಯೇ?*

ಉ) *ತೆಗೆದುಕೊಂಡಿದ್ದಲ್ಲಿ ಮನೆಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಂಡಿದೆಯೇ, ವಿವರ ನೀಡುವುದು?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಬಂದಿದೆ

ಆ) ಈ ಯೋಜನೆಗೆ ಸರ್ಕಾರದಿಂದ ನೇರವಾಗಿ ಹಣ ಬಿಡುಗಡೆ ಮಾಡಲಾಗುವುದಿಲ್ಲ. ಆದರೆ, ಸಾಲವನ್ನು ಪಡೆಯಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಶೆಟ್ಟಿಹಳ್ಳಿ ಮತ್ತು ಮರಳೂರು ಗ್ರಾಮಗಳಲ್ಲಿ ಗೃಹ ಮಂಡಳಿಯವರು ವಿವಿಧ ಮನೆಗಳನ್ನು ಕಟ್ಟಲು ಜಮೀನು ಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಾಲಂ 6(1)ರ ಅನ್ವಯ. ಪೋಷಣೆ ಮಾಡಿರುವುದು ಸರಿಯಷ್ಟೆ. ಇದರ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ದಾವೆ ಇದ್ದು ಇದು ಗೃಹ ಮಂಡಳಿಯ ಪರವಾಗಿ ಆದೇಶವಾಗಿರುವುದರಿಂದ ಅವಾರ್ಡ್ ನೋಟಿಸ್‌ನ ತಿಳುವಳಿ ಪತ್ರಗಳನ್ನು ಜಾರಿಗೊಳಿಸಿ ತದನಂತರ ಜಮೀನು ಖಾತೆದಾರರುಗಳಿಂದ ತೆಗೆದುಕೊಳ್ಳಲಾಗುವುದನ್ನು ಮುಂದುವರಿಸಲಾಗುತ್ತಿದೆ.

ಉ) ಪೂರ್ಣವಾಗಿ ಜಮೀನನ್ನು ವಶಕ್ಕೆ ತೆಗೆದುಕೊಂಡ ನಂತರ ಮನೆ ಕಟ್ಟುವ ಯೋಜನೆಯ ಬಗ್ಗೆ ಪರಿಶೀಲಿಸಲಾಗುವುದು.

ಆರಾಧನಾ ಸಮಿತಿಯ ಅಧಿಕಾರ ಮತ್ತು ವ್ಯಾಪ್ತಿ

1642 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಸಮಿತಿಯ ಅಧಿಕಾರ ಹಾಗೂ ವ್ಯಾಪ್ತಿ ಏನು?

ಆ) ಈ ಸಮಿತಿಯ ಶಿಫಾರಸ್ಸುಗಳನ್ನು ಜಿಲ್ಲಾಧಿಕಾರಿಗಳು ತಿರಸ್ಕರಿಸಬಹುದೆ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ವಿಧಾನ ಸಭಾ ಕ್ಷೇತ್ರವಾರು ರಚಿಸಿರುವ ಆರಾಧನಾ ಸಮಿತಿಯು ಸಂಬಂಧಿಸಿದ ವಿಧಾನ ಸಭಾ ಕ್ಷೇತ್ರದಲ್ಲಿ ಆರಾಧನಾ ಯೋಜನೆಗೆ ಒಳಪಡುವ ಧಾರ್ಮಿಕ ಸಂಸ್ಥೆಗಳಿಗೆ ದಿ:8-1-97ರ ಸರ್ಕಾರಿ ಆದೇಶ ಸಂ.ಕಂಇ104 ಮುಇವಿ95ರಲ್ಲಿ ನೀಡಿರುವ ಮಾರ್ಗ ಸೂಚಿಗಳಲ್ಲಿ ನಿಗಧಿಪಡಿಸಿರುವ ಇತಿಮಿತಿಗೆ ಒಳಪಟ್ಟು ಅನುದಾನ ಮಂಜೂರು ಮಾಡುವ ಅಧಿಕಾರ ಇರುತ್ತದೆ.

ಆ) ದಿನಾಂಕ : 8-1-97ರ ಸರ್ಕಾರದ ಆರಾಧನಾ ಯೋಜನೆಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಶಿಫಾರಸ್ಸುಗಳನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ.